**ದಿನಾಂಕ 23.01.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ನಾನು 8 ನೇ ತರಗತಿಯವರೆಗೂ ವ್ಯಾಸಾಂಗ ಮಾಡಿದ್ದೇನೆ. ನಾನು ಛಾಯಾಗ್ರಾಹಕ. ದಾವೆಯನ್ನು ಯಾರು ಯಾರ ವಿರುದ್ಧ, ಏತಕ್ಕಾಗಿ ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ದಾವೆಯನ್ನು ಹನುಮಕ್ಕನವರು ಪ್ರಸನ್ನಪ್ಪನ ಮಕ್ಕಳ ಮೇಲೆ ತಂದಿದ್ದಾರೆ. ಎಷ್ಟು ಸ್ವತ್ತುಗಳ ಮೇಲೆ ಕೇಸನ್ನು ತಂದಿದ್ದಾರೆ ಎಂದರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತುಗಳನ್ನು ನೋಡಿಲ್ಲ ಎಂದು ಬರೆಸಿದ್ದೇನೆ . ಪ್ರಸನ್ನಕುಮಾರ್ ರವರ ಹೆಂಡತಿ ಕೃಷ್ಣವೇಣಿ ಮತ್ತು ಅವರ ಮಕ್ಕಳನ್ನು ನೋಡಿದ್ದೇನೆ. ಕೃಷ್ಣವೇಣಿಯವರ ಮಕ್ಕಳು ಇರುವುದು ನನಗೆ ಗೊತ್ತಿದೆ. ಕೃಷ್ಣವೇಣಿಯವರು ಜೀವಂತವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ.
2. ನಾನು ಸಲ್ಲಿಸಿರುವ ಪ್ರಮಾಣ ಪತ್ರವನ್ನು ಹನುಮಕ್ಕ ಮತ್ತು ಅವರ ಮಕ್ಕಳು ಹೇಳಿ ತಯಾರಿಸಿರುತ್ತಾರೆ, ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಹನುಮಂತಪ್ಪನವರು ನನ್ನನ್ನು ಸಾಕ್ಷಿ ನುಡಿಯಲು ಕೇಳಿಕೊಂಡ ಕಾರಣ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ. ನನ್ನ ವಾಸದ ಮನೆಯ ಸಂಖ್ಯೆ ಮತ್ತು ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದು ಈಗ ಇಲ್ಲ. ನಮ್ಮ ವಾಸದ ಮನೆ ಇತ್ತು, ಅದನ್ನು ಬಾಡಿಗೆಗೆ ಕೊಟ್ಟಿದ್ದೆವು ಎಂದು ಹೇಳುವುದಕ್ಕೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಆ ಬಗ್ಗೆ ದಾಖಾಲತಿ ಇಲ್ಲ, ಆದರೆ ಒಂದು ಮನೆಯನ್ನು ಪ್ರಸನ್ನಪ್ಪ ಮತ್ತು ಹನುಮಕ್ಕನವರಿಗೆ ಬಾಡಿಗೆಗೆ ಕೊಟ್ಟಿದ್ದೆನು. ಪ್ರಸನ್ನಪ್ಪ ಮತ್ತು ಹನುಮಕ್ಕನವರಿಗೆ ಬಾಡಿಗಗೆ ಕೊಟ್ಟಿರುವ ಬಗ್ಗೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಬಾಡಿಗೆಗೆ ಕೊಟ್ಟಿದ್ದರು, ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.
3. ಯಾರಿಗಾದರೂ ಬಾಡಿಗೆಗೆ ಕೊಟ್ಟಲ್ಲಿ ಅಗ್ರಿಮೆಂಟ್ ಮತ್ತು ದಾಖಲಾತಿಗಳು ಇರುತ್ತವೆ ಎಂದರೆ ಸಾಕ್ಷಿಯು ಮೊದಲು ಹಳೇ ಕಾಲದಲ್ಲಿ ಒಂದು ವಿಶ್ವಾಸದ ಮೇರೆಗೆ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಯಾವ ವರ್ಷದಂದು ಪ್ರಸನ್ನಕುಮಾರ್ ಮತ್ತು ಹನುಮಕ್ಕನವರಿಗೆ ಮನೆಯನ್ನು ಬಾಡಿಗೆಗೆ ಕೊಡಲಾಗಿದೆ ಎಂದರೆ ಸಾಕ್ಷಿಯು ನಿಖರವಾದ ದಿನಾಂಕ ನನಗೆ

ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಸನ್ನಕುಮಾರ್ ರವರು ಎಷ್ಟು ದಿನಗಳು ಬಾಡಿಗೆಗೆ ಇದ್ದರು ಎಂದರೆ ಸಾಕ್ಷಿಯು ನಾನು ನೋಡಿದಂತೆ ಅವರು ಸುಮಾರು 8-10 ವರ್ಷಗಳ ಕಾಲ ಬಾಡಿಗೆಗೆ ಇದ್ದರು ಎಂದು ನುಡಿಯುತ್ತಾರೆ. ಪ್ರಸನ್ನಕುಮಾರ್ ರವರು ಬಾಡಿಗೆಗೆ ಇರುವ ಕಾಲಕ್ಕೆ ಅವರಿಗೆ ಎಷ್ಟು ವರ್ಷಗಳು ಮತ್ತು ನನಗೆ ಎಷ್ಟು ವರ್ಷಗಳು ಎಂದರೆ ಸಾಕ್ಷಿಯು ಆಗ ನನಗೆ ಸುಮಾರು 15 ವರ್ಷ ವಯಸ್ಸು ಆಗಿತ್ತು, ಆದರೆ ಪ್ರಸನ್ನಕುಮಾರ್ ಮತ್ತು ಹನುಮಕ್ಕನವರಿಗೆ ಎಷ್ಟು ವಯಸ್ಸು ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

4. ಪ್ರಸನ್ನಕುಮಾರ್ ರವರು ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದು ಹೇಳಲು ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಯಾವುದೇ ದಾಖಲಾತಿ ಇಲ್ಲ ಎಂದು ನುಡಿಯುತ್ತಾರೆ. ಹನುಮಕ್ಕ ಮತ್ತು ಪ್ರಸನ್ನಕುಮಾರ್ ರವರಿಗೆ ಸಂಬಂಧಪಟ್ಟ ದಾಖಲಾತಿಯನ್ನು ನಾನು ನೋಡಿಲ್ಲ. 2 ನೇ ವಾದಿ ಹನುಮಂತಪ್ಪನವರು ಮತ್ತು ನಾನು 8 ನೇ ತರಗತಿಯನ್ನು ತಾವರೆಕೆರೆ ಶಾಲೆಯಲ್ಲಿ ವ್ಯಾಸಾಂಗ ಮಾಡಿದ್ದೆನು. 2 ನೇ ವಾದಿಯೂ ಸಹ ತಾವರೆಕೆರೆ ಶಾಲೆಯಲ್ಲಿ ವ್ಯಾಸಾಂಗ ಮಾಡಿದ್ದರು ಎಂದರೆ ಸರಿ. ಅಂದಿನಿಂದಲೂ ನನಗೂ 2 ನೇ ವಾದಿಗೂ ವಿಶ್ವಾಸ ಚೆನ್ನಾಗಿದೆ ಎಂದರೆ ಸರಿ. 2 ನೇ ವಾದಿ ಹನುಮಂತಪ್ಪನಿಗೆ ಒಡ್ಡರಹಟ್ಟಿಯಲ್ಲಿ ಸರ್ಕಾರದಿಂದ ಒಂದು ನಿವೇಶನ ಮಂಜೂರಾಗಿದ್ದು, ಅದರಲ್ಲಿಯೇ ಒಂದು ಮನೆಯನ್ನು ಕಟ್ಟಿ 1 ಮತ್ತು 2 ನೇ ವಾದಿಯರು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಮನೆಯನ್ನು ಬಾಡಿಗೆಯಿಂದ ಬಿಟ್ಟು ಹೋದ ನಂತರ ಸದರಿ ಮನೆಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ.

5. 1 ಮತ್ತು 2 ನೇ ವಾದಿಯರು ನಮ್ಮ ಮನೆಯನ್ನು ಬಾಡಿಗೆಯಿಂದ ಬಿಟ್ಟು ಹೋಗಿ ಎಷ್ಟು ವರ್ಷಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ಸದರಿಯವರು ನಮ್ಮ ಮನೆಯನ್ನು ಬಿಟ್ಟು ಹೋದಾಗ ನನಗೆ ಸುಮಾರು 15-16 ವರ್ಷಗಳ ವಯಸ್ಸು ಇತ್ತು. ನಾನು ಮತ್ತು 2 ನೇ ವಾದಿ ಒಂದೇ ಶಾಲೆಗೆ ಹೋಗುತ್ತಿದ್ದು, ಅಂದಿನಿಂದಲೂ ಸಹ ಅವರ ಶಾಲಾ ದಾಖಲಾತಿಯ ಬಗ್ಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನಿ.ಡಿ.1 ರ ಛಾಯಾ ಚಿತ್ರದಲ್ಲಿ ಇರುವ ವ್ಯಕ್ತಿ

ಹನುಮಕ್ಕ ಎಂದರೆ ಸರಿ. ನಿ.ಡಿ.1 ರಲ್ಲಿ ತಿಮ್ಮಾಭೋವಿ ಎಂದು ತೋರಿಸಲಾಗಿದ್ದು, ಅವರೇ ಅವರ ಗಂಡ ಎಂದರೆ ಸಾಕ್ಷಿಯು ತಿಮ್ಮಾಭೋವಿ ಹನುಮಕ್ಕನ ಅಣ್ಣ ಎಂದು ನುಡಿಯುತ್ತಾರೆ. ನಿ.ಡಿ.1 ರಲ್ಲಿ ತಿಮ್ಮಾಭೋವಿಯನ್ನು ಹನುಮಕ್ಕನ ಗಂಡ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ದಾಖಲಾತಿ ಎಲೆಕ್ಷನ್ ಐ.ಡಿ. ಕಾರ್ಡ್ ಆಗಿರುವುದರಿಂದ ಅದು ತಪ್ಪಾಗಿರಬಹುದು ಎಂದು ನುಡಿಯುತ್ತಾರೆ.

6. ನಮ್ಮ ಮನೆಯಲ್ಲಿ ಹನುಮಕ್ಕ ಮತ್ತು ಪ್ರಸನ್ನಕುಮಾರ್ ರವರು ಬಾಡಿಗೆಗೆ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಯಾವುದೇ ಮನೆ ಇಲ್ಲ, ಯಾರೂ ಸಹ ಬಾಡಿಗೆಗೆ ಇದ್ದದ್ದೂ ಇಲ್ಲ ಎಂದರೆ ಸರಿಯಲ್ಲ. ಪ್ರಸನ್ನಕುಮಾರ್ ರವರು ಶಿರಾದಲ್ಲಿ ವಾಸವಿದ್ದರು ಎಂದರೆ ಇರಬಹುದು, ಆದರೆ ನಿಖರವಾಗಿ ನನಗೆ ಗೊತ್ತಿಲ್ಲ. ಪ್ರಸನ್ನಕುಮಾರ್ ರವರು ಏನೆಲ್ಲಾ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಹನುಮಕ್ಕ ಮತ್ತು ಪ್ರಸನ್ನಕುಮಾರ್ ರವರು ಜೊತೆಯಲ್ಲಿ ಜೀವನ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಅವರು ಎಂದಿಗೂ ನಮ್ಮ ಬಾಡಿಗೆ ಮನೆಯಲ್ಲಿ ಗಂಡ ಹೆಂಡತಿಯಾಗಿ ವಾಸ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಸನ್ನಕುಮಾರ್ ರವರ ಹೆಂಡತಿ ಹನುಮಕ್ಕ ಅಲ್ಲವೇ ಅಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ಅವರ ಮಗನೂ ಅಲ್ಲ ಎಂದರೆ ಸರಿಯಲ್ಲ. ನಾನು 2 ನೇ ವಾದಿಯ ಜೊತೆ ಮೊದಲಿನಿಂದಲೂ ವಿಶ್ವಾಸವಿರುವ ಕಾರಣ ಅವರ ಮಾತನ್ನು ಕೇಳಿ ಉದ್ದೇಶಪೂರ್ವಕವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**